# ಶ್ರೀಶಾರದಾ ಷೋಡಶೀ ಸ್ತುತಿಯಿಂದ

**ಯಾ ಶಾರದೈವ ಸಕಲಾಗಮಬೋಧರೂಪಾ**
**ಶ್ರೀರಾಮಕೃಷ್ಣಪರಹಂಸಪತಿವ್ರತಾಭೂತ್ ।**
**ಶ್ರೀಶಾರದಾಮಣಿರಿತಿ ಪ್ರಥಿತಾಭಿಧಾನಾ**
**ತಾಂ ಮಾತರಂ ಪ್ರಣಮತ ಪ್ರಿಯಭಕ್ತವರ್ಗಾಃ ॥ ೧ ॥**

ಯಾರು ಎಲ್ಲ ಆಗಮಗಳಿಂದ ತಿಳಿಯಲ್ಪಡುವ ಸಾಕ್ಷಾತ್ ಜಗನ್ಮಾತೆ ಸರಸ್ವತಿಯೇ ಆಗಿರುವರೋ, ಯಾರು ಶ್ರೀರಾಮಕೃಷ್ಣ ಪರಮಹಂಸರ ಸಹ ಧರ್ಮಿಣಿಯಾಗಿದ್ದರೋ, ಯಾರು 'ಶ್ರೀಶಾರದಾಮಣಿ' ಎಂಬ ಹೆಸರಿನಿಂದ ಖ್ಯಾತರಾದರೋ, ಅಂತಹ ಮಾತೆಯನ್ನು ಪ್ರಿಯಭಕ್ತರೆಲ್ಲರೂ ನಮಿಸಿರಿ.

**ಉದೀರ್ಣಸರ್ವಾದ್ವಯಬೋಧವಾರಿಧಿಂ**
**ವಿಲೋಕ್ಯ ತಂ ಹಂತ ಪತಿಂ ಪತಿವ್ರತಾ ।**
**ಜುಹಾವ ಯಾ ಯೌವನಮಾತ್ಮನೋ ಹವಿಃ**
**ತದೀಯವೈರಾಗ್ಯಪವಿತ್ರಪಾವಕೇ ॥ ೨ ॥**

ಮಹಾಪತಿವ್ರತೆಯಾದ ಈ ಮಾತೆಯು, ತನ್ನ ಪತಿ ಅದ್ವೈತ ಜ್ಞಾನದ ಮಹಾಸಮುದ್ರವೆಂಬುದನ್ನು ಅರಿತು, ಅವರ ವೈರಾಗ್ಯವೆಂಬ ಪವಿತ್ರಾಗ್ನಿಯಲ್ಲಿ ತಮ್ಮ ಯೌವನವನ್ನು ಹವಿಸ್ಸಾಗಿ ಅರ್ಪಿಸಿದರು.

**ಶಿವಮನು ತಪಸಿ ನಿವಿಷ್ಟಾ ತಮಪಿ ಜಯಂತೀ ನಿಜೈರ್ನಿಯಮೈಃ ।**
**ಪಾರ್ವತ್ಯೇವೈಷೇತಿ ಧ್ಯಾಯತ ಭೋಃ ಶಾರದಾಂ ಜನನೀಮ್ ॥**

ಶಿವನನ್ನೇ ಅನುಸರಿಸಿ ತಪಸ್ಸನ್ನಾಚರಿಸಿದ ಪಾರ್ವತಿಯು, ಕೊನೆಗೆ ತಪಸ್ಸಿನ ಮಹಿಮೆಯಲ್ಲಿ ತನ್ನ ಪತಿಯನ್ನೇ ಮೀರಿ ನಿಂತಳು. ಅಂತಹ ಪಾರ್ವತಿಯೇ ಈ ಶಾರದಾಮಾತೆಯೆಂದು ಧ್ಯಾನಿಸಿರಿ.



**ಅಧ್ಯಾತ್ಮಪದ್ಮಮಧುವಾಸಿತಮಾನಸಾಂತಃ-**
**ಪೋಪ್ಲೂಯಮಾನಪರಹಂಸಸದಾನುಯಾನಾ ।**
**ನಿತ್ಯಂ ಸಮುಲ್ಲಸತು ನೋ ಹೃದಿ ರಾಜಹಂಸೀ**
**ಶ್ರೀಶಾರದಾ ದುರಿತನಾಶವಿಶಾರದಾ ಸಾ ॥**

ಅಧ್ಯಾತ್ಮವೆಂಬ ತಾವರೆಯ ಮಕರಂದವನ್ನು ಹೀರುವ, ಮಾನಸವೆಂಬ ಸರೋವರದಲ್ಲಿ ಪರಮಹಂಸದೊಂದಿಗೆ ಸದಾ ವಿಹರಿಸುತ್ತಿರುವ, ಪರಮಹಂಸಿಯಾದ ಶ್ರೀ ಶಾರದಾಮಾತೆಯು ಎಲ್ಲ ದುರಿತಗಳನ್ನೂ ನಾಶಮಾಡುವವರು. ಅವರು ನಮ್ಮ ಹೃದಯದಲ್ಲಿ ನಿತ್ಯವೂ ನಲಿದಾಡಲಿ.

**— ಡಾ. ವಿ. ರಾಘವನ್**

## ಸೂಕ್ತಿಪ್ರಭ

# ಶ್ರೀಮಾತೆಯವರ ಉಪದೇಶಗಳು

❖ ಭಗವಂತನ ನಾಮಜಪ ಮಾಡಿದರೆ, ಕಾಲು ಕತ್ತರಿಸಿ ಹೋಗಬೇಕಾದಲ್ಲಿ ಒಂದು ಸೂಜಿ ಚುಚ್ಚುವುದು ಅಷ್ಟೆ. ಜಪತಪಾದಿಗಳನ್ನು ಮಾಡಿದರೆ ಕರ್ಮ ಬಹುಪಾಲು ಕ್ಷಯವಾಗುವುದು.

❖ ಎಲ್ಲವೂ ಮನಸ್ಸನ್ನೇ ಅವಲಂಬಿಸಿದೆ. ಮನಸ್ಸಿನಲ್ಲಿಯೇ ಶುದ್ಧ, ಅಶುದ್ಧ ಎಲ್ಲವೂ. ಮನುಷ್ಯ ತನ್ನ ಮನಸ್ಸನ್ನು ಮೊದಲು ಮಲಿನಗೊಳಿಸಿಬಿಡುತ್ತಾನೆ. ಆದ್ದರಿಂದಲೇ ಅವನು ಇತರರ ದೋಷವನ್ನು ನೋಡುತ್ತಾನೆ. ನೀನು ಇತರರ ದೋಷವನ್ನು ನೋಡಿದರೆ ಅವನಿಗೇನಾಗುತ್ತದೆ? ಅದರಿಂದ ನಿನಗೇ ಹಾನಿಯಾಗುತ್ತದೆ.. ದೋಷವನ್ನು ನೋಡಬಾರದು. ಇತರರ ದೋಷ ನೋಡದಿರುವುದು ಕ್ಷಮಾರೂಪದ ತಪಸ್ಸು.

❖ ಗಂಗಾತೀರದಲ್ಲಿ ನಾಲ್ಕು ಕ್ರೋಶ (ಎಂಟು ಮೈಲಿ)ದುದ್ದಕ್ಕೂ ಪವಿತ್ರ ಗಾಳಿ ಬೀಸುತ್ತಿರುತ್ತದೆ. ಗಾಳಿಯ ರೂಪದ ನಾರಾಯಣ ಅದು! ತುಂಬಾ ತಪಸ್ಸು ಮಾಡಿದರೆ ಮಾತ್ರ ಮನಸ್ಸು ಶುದ್ಧವಾಗುವುದು. 'ಸಾಧನೆ ಮಾಡದೆ ಶುದ್ಧವಸ್ತುವಾದ ಭಗವಂತನ ಪ್ರಾಪ್ತಿಯಾಗದು.'

❖ ಮನಸ್ಸು ಶುದ್ಧವಾದರೆ ಧ್ಯಾನ, ಧಾರಣ ಯಾಕೆ ಸಾಧ್ಯವಾಗದು? ದರ್ಶನವೇಕಾಗದು? ಜಪ ಮಾಡಲು ಕುಳಿತರೆ ಒಳಗಿನಿಂದ ತಾನಾಗಿಯೇ ಭಗವಂತನ ನಾಮ ಮೇಲಕ್ಕೆ ಎದ್ದು ಬರತೊಡಗುವುದು. ಅದಕ್ಕಾಗಿ ವಿಶೇಷ ಪ್ರಯತ್ನ ಮಾಡಬೇಕಾಗುವುದಿಲ್ಲ.

❖ ನೋಡು ಮಗೂ, ಸಾಧನೆ ಅಂತ ಹೇಳು, ಅಥವಾ ಭಜನೆ ಅಂತಲಾದರೂ ಹೇಳು — ಎಲ್ಲವನ್ನೂ ಈ ವಯಸ್ಸಿನಲ್ಲೇ ಮಾಡಿ ಮುಗಿಸು. ಕೊನೆಗಾಲದಲ್ಲಿ ಇನ್ನೇನಾಗುವುದು? ಏನೇನು ಮಾಡಲಾಗುವುದೋ ಎಲ್ಲವೂ ಈಗ ಮಾತ್ರ ಸಾಧ್ಯ.

❖ ಮನುಷ್ಯ ಭಗವಂತನನ್ನು ಮರೆತೇ ಬಿಟ್ಟಿದ್ದಾನೆ. ಆದ್ದರಿಂದ ಯಾವಾಗ ಆವಶ್ಯಕತೆಯಿದೆಯೋ ಆಗ ಭಗವಂತ ತಾನಾಗಿಯೇ ಒಮ್ಮೊಮ್ಮೆ ಬಂದು, ಸಾಧನೆ ಮಾಡಿ, ಇತರರಿಗೆ ದಾರಿ ತೋರಿಸಿಕೊಡುತ್ತಾನೆ. ಈ ಬಾರಿ ಭಗವಂತ (ಶ್ರೀರಾಮಕೃಷ್ಣ ಅವತಾರದ ಮೂಲಕ) ತ್ಯಾಗವನ್ನು ತೋರಿಸಿಕೊಟ್ಟಿದ್ದಾನೆ.

(**'ಶ್ರೀಶಾರದಾದೇವಿ ವಚನವೇದ'** ದಿಂದ)